**ದಿನಾಂಕ: 26.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ.ಎ ಹೆಚ್ ಡಿ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ದೂರುದಾರರು ನನಗೆ ಎಂದೂ ಸಹ ಪರಿಚಯಸ್ಥನಲ್ಲ. ಆತನನ್ನು ಎಂದೂ ಸಹ ನಾನು ನೋಡಿರುವುದಿಲ್ಲ. ಮೊಬೈಲ್ ನಂಬರ 9036392784 ನನಗೆ ಸೇರಿದ ನಂಬರ ಆಗಿರುತ್ತದೆ. ಅದೇ ರೀತಿ 9591759308 ಯಾರಿಗೆ ಸೇರಿದ್ದು ಎಂಬುದು ನನಗೆ ಗೊತ್ತಿಲ್ಲ. ಈ ನಂಬರ ಆರೋಪಿಗೆ ಸಂಬಂಧಿಸಿದ್ದು, ಈ ನಂಬರದಿಂದ ಫೋನ್ ಪೇ ಮೂಲಕ ನನ್ನ ಮೊಬೈಲ್ ನಂಬರಗೆ ಸಾಕಷ್ಟು ಬಾರಿ ಹಣ ಬಂದಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 18.05.2023 ರಂದು ದೂರುದಾರರಿಂದ ಕಾನೂನುಬದ್ಧ ನೋಟಿಸು ನನಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ನೋಟಿಸು ನನಗೆ ಮುಟ್ಟಿರುತ್ತದೆ ಎಂದರೆ

ಸರಿಯಲ್ಲ. ನವೆಂಬರ್–2022 ನೇ ಮೊದಲನೇ ವಾರದಂದು ದೂರುದಾರರು ನನಗೆ ರೂ.2 ಲಕ್ಷದ 10 ಸಾವಿರ ಹಣ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗ ತೋರುತ್ತಿರುವ ನಿಪಿ–1 ರಂತಹ ಚೆಕ್ ನನ್ನ ಖಾತೆಗೆ ಸಂಬಂಧಿಸಿದ್ದಾಗಿರುತ್ತದೆ. ಈಗ ತೋರುತ್ತಿರುವ ನನ್ನ ವಕಾಲತ್ ನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಈಗ ತೋರುತ್ತಿರುವ ನಿಪಿ–1 ರಂತಹ ಚೆಕ್ ನ ಮೇಲಿರುವ ಸಹಿ ನನ್ನದಾಗಿರುವುದಿಲ್ಲ. ನನ್ನ ಹೆಸರಿನಲ್ಲಿ ಕೋಟಾಕ್ ಬ್ಯಾಂಕ್ ನಲ್ಲಿ ಖಾತೆ ಇದ್ದು ಅದು ಮುಕ್ತಾಯಗೊಂಡಿರುತ್ತದೆ. ನಿಪಿ–1 ರಲ್ಲಿರುವ ಸಹಿ ಮತ್ತು ಬರವಣಿಗೆ ನನ್ನದಾಗಿರುವುದಿಲ್ಲ. ಆ ಚೆಕ್ ನ ಮೇಲೆ ಇರುವ ಸಹಿ ನನ್ನದಾಗಿರುವುದರಿಂದ ಬ್ಯಾಂಕ್ ನವರು ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಚೆಕ್ ಕಳೆದು ಹೋಗಿರುವ ಬಗ್ಗೆ ಬ್ಯಾಂಕ್ ಗೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಬದಲಾಗಿ ಮೌಖಿಕವಾಗಿ ತಿಳಿಸಿರುತ್ತೇನೆ. ನನ್ನ ಚೆಕ್ ಕಳೆದು ಹೋಗಿರುವ ಬಗ್ಗೆ ಪೋಲಿಸರಿಗೆ ದೂರು ನೀಡಿರುವುದಿಲ್ಲ. ಈ ಪ್ರಕರಣ ದಾಖಲಾದ ನಂತರವು ಸಹ ನನ್ನ ಚೆಕ್ ಕಳೆದು ಹೋಗಿರುವ ಬಗ್ಗೆ ಪೋಲಿಸರಿಗೆ ದೂರು ನೀಡಿರುವುದಿಲ್ಲ. ನಾನು ಬ್ಯಾಂಕ್ ಸಾಲ ಪಡೆಯಲು ಚೆಕ್ ತಗೆದುಕೊಂಡು ಹೋಗಿದ್ದ ಸಂದರ್ಭದಲ್ಲಿ ಹಾವೇರಿಯಲ್ಲಿ ನನ್ನ ಚೆಕ್ ಕಳೆದು ಹೋಗಿರುತ್ತದೆ. ನಾನು ಎಪ್ರಿಲ್–2022 ರಂದು ಸುಯೋಗ ಸಂಘದಲ್ಲಿ ಸಾಲ ಪಡೆಯಲು ಹೋಗಿದ್ದ ಸಂದರ್ಭದಲ್ಲಿ ಚೆಕ್ ಕಳೆದು ಹೋಗಿರುತ್ತದೆ. ನಾನು ನನ್ನ ವಕಾಲತ್ ನಲ್ಲಿ ಉದ್ದೇಶಪೂರ್ವಕವಾಗಿಯೇ ಬೇರೆ ರೀತಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಹಣ ಕೊಡುವುದರಿಂದ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ

ಮತ್ತು ಜೆ.ಎಂ.ಎಫ್.ಸಿ, ಹಾನಗಲ್